ಶ್ರೀ ಗಣೇಶ ಶಾರದ ಗುರುಭ್ಯೋ ನಮಃ

# ಸ್ವಪ್ನ ಲಬ್ಧ ಸ್ವಯಂ ವ್ಯಕ್ತ ಶ್ರೀ ಗುರುರಾಯರ ಪ್ರತೀಕ ಸನ್ನಿಧಾನ



ಗುರುವಾರ ಬಂತಮ್ಮಾ ಗುರುರಾಯರ ನೆನೆಯಮ್ಮಾ ,

ಸ್ಮರಣೆ ಮಾತ್ರದಲಿ ಕ್ಲೇಶ ಕಳೆದು ಸದ್ಗತಿಯ ಕೊಡುವನಮ್ಮಾ.

ಆಧ್ಯಾತ್ಮ ಬದುಕಿನ ಶ್ರೇಷ್ಟತೆಯನ್ನು ಸಾರುತ್ತಲೇ ಇಹ ಜೀವನದ ಸಾರ್ಥಕ್ಯವನ್ನು ಕಂಡುಕೊಂಡವರು ಶ್ರೀ ಗುರುರಾಘವೇಂದ್ರರು. ಜಾತಿ, ಮತ, ಪಂಥಗಳನ್ನು ಮೀರಿ ಸರ್ವ ಸಜ್ಜನರನ್ನೂ ಉದ್ಧರಿಸುತ್ತಿರುವ ಶ್ರೀ ರಾಘವೇಂದ್ರ ಗುರು ಸಾರ್ವಭೌಮರು, ತುಂಗಾ ತೀರದಲ್ಲಿರುವ ಮಂತ್ರಾಲಯದಲ್ಲಿ ಸಶರೀರವಾಗಿ ಬೃಂದಾವನಸ್ಥರಾಗಿ 352 ವರ್ಷಗಳಾಗಿವೆ. ವಿಶ್ವದ ಉದ್ದಗಲಕ್ಕೂ ಮೃತ್ತಿಕಾ ಬೃಂದಾವನದಲ್ಲಿ ನೆಲೆನಿಂತ ಶ್ರೀಗುರುರಾಯರು, ನಂಬಿ ಬಂದ ಭಕ್ತರ ಕಷ್ಟ ಕಾರ್ಪಣ್ಯಗಳನ್ನು ಪರಿಹರಿಸಿ, ಬೇಡಿದ ಇಷ್ಟಾರ್ಥಗಳನ್ನು ಈಡೇರಿಸುತ್ತಿದ್ದಾರೆ.

ಪೂಜ್ಯಾಯ ರಾಘವೇಂದ್ರಾಯ ಸತ್ಯಧರ್ಮ ರತಾಯ ಚ ।

ಭಜತಾಂ ಕಲ್ಪವೃಕ್ಷಾಯ ನಮತಾಂ ಕಾಮಧೇನವೇ ॥

ಇಂದು, ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಶ್ರಾವಣ ಮಾಸದ ಕೃಷ್ಣ ಪಕ್ಷದ ಪಾಡ್ಯ, ಗುರುವಾರ. ಈ ಶ್ರೀ ಗುರುರಾಯರ ಪೂರ್ವಾರಾಧನೆಯ ಪುಣ್ಯದಿವಸದ ಸಂಧ್ಯಾಕಾಲದಲ್ಲಿ, ನಮ್ಮ ನಾದಾರ್ಚನೆ ತಂಡ, **ಸ್ವಪ್ನ ಲಬ್ಧ ಸ್ವಯಂ ವ್ಯಕ್ತ ಶ್ರೀ ಗುರುರಾಜರು** ನೆಲೆಸಿರುವ ಪ್ರತೀಕ ಸನ್ನಿಧಾನದ ಮಾನಸಿಕ ದರ್ಶನದ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಈ ಸ್ಥಳ ಶ್ರೀ ಗುರುರಾಯರು ವಿಗ್ರಹದ ರೂಪದಲ್ಲಿ ಪೂಜಿಸಲ್ಪಡುವ ಜಗತ್ತಿನ ಏಕೈಕ ಸ್ಥಳ. ಪ್ರತೀಕವಾದರೋ ಬಹಳ ಪ್ರತ್ಯೇಕವಾದುದು. ಈ ವಿಗ್ರಹವು ಯಾರೂ ಕೆತ್ತಿರುವುದಲ್ಲ. ಸ್ವತಃ ಬಯಸಿ ಭಕ್ತನ ಬಯಕೆಯ ಚಿಂತಾಮಣಿಯಾಗಿ ಉಧ್ಭವವಾಗಿರುವ ದಿವ್ಯ ವಿಗ್ರಹ. ಬೃಂದಾವನದೊಳಗೆ ರಾಯರು ಯಾವ ಭಂಗಿಯಲ್ಲಿ ಕುಳಿತು ಬೃಂದಾವನಸ್ಥರಾಗಿರುವರೋ ಅದೇ ದಿವ್ಯ ಭಂಗಿಯಲ್ಲಿರುವ ಪ್ರತೀಕ.

ನಂಜನಗೂಡು ದಕ್ಷಿಣಕಾಶಿ ಎಂದು ಪ್ರಸಿದ್ಧಿ ಪಡೆದ ಪರಮ ಪುಣ್ಯಕ್ಷೇತ್ರ. ಶ್ರೀಕಂಠೇಶ್ವರನ ದೇವಸ್ಥಾನದ ಸಮೀಪದಲ್ಲಿ ಶೃಂಗೇರಿ ಮಠ ಇರುವ ಸಾಲಿನಲ್ಲಿ ಸುಮಾರು ಎರಡು ಶತಮಾನಗಳ ಇತಿಹಾಸವಿರುವ ಪರಂಪರೆಯ ಕಟ್ಟಡ.

**"ಶ್ರೀ ಶ್ರೀ ರಾಘವೇಂದ್ರಸ್ವಾಮಿಗಳ ಮಠ ಪ್ರತೀಕ ಸನ್ನಿಧಾನ"**

ದುರ್ವಾದಿಧ್ವಾಂತರವಯೇ ವೈಷ್ಣವೇಂದೀವರೇಂದವೇ ।

ಶ್ರೀರಾಘವೇಂದ್ರ ಗುರವೇ ನಮೋತ್ಯಂತ ದಯಾಳವೇ ॥

ಎಂದಿರುವ ಸ್ವಾಗತ ಫಲಕ.

ಒಳಗೆ ಪ್ರವೇಶಿಸುತ್ತಿದ್ದಂತೆ ಅಕ್ಕ ಪಕ್ಕ ದೂರದಿಂದ ದಣಿದು ಬಂದ ಭಕ್ತ ಸಮೂಹ ವಿಶ್ರಾಂತಿ ಪಡೆಯಲು ಇರುವ ವಿಶಾಲವಾದ ಜಗುಲಿಗಳು.

ಪ್ರವೇಶ ದ್ವಾರದಿಂದ ಒಳಗೆ ಕಾಣುತ್ತಿರುವ ಮುಖ್ಯಪ್ರಾಣದೇವರ ದಿವ್ಯ ಸನ್ನಿಧಿ.

**“ಹರಿ ಸರ್ವೋತ್ತಮ ! ವಾಯು ಜೀವೋತ್ತಮ !”**



ನಮ್ಮ ಶ್ರೀಗುರುರಾಯರು ಶ್ರೀಹರಿಯ ಮತ್ತು ಮುಖ್ಯಪ್ರಾಣದೇವರ ಅಂತರಂಗ ಭಕ್ತರು. ಅವರ ವಿಶೇಷ ಅನುಗ್ರಹಕ್ಕೆ ಪಾತ್ರರಾದವರು. ಶ್ರೀಹರಿ, ಪ್ರಾಣದೇವರಂತೆಯೇ ಇವರೂ ಸಹಾ ಭಕ್ತರಿಗೆ ಲೌಕಿಕ ಫಲಗಳನ್ನು ದಯಪಾಲಿಸುವುದಲ್ಲದೇ ಅಲೌಕಿಕವಾದ ಮೋಕ್ಷವನ್ನೂ ನೀಡಬಲ್ಲ ಸಮರ್ಥರು.

"ವಿಷ್ಣುವೇ ಸರ್ವೋತ್ತಮ, ಸಮಸ್ತ ಜೀವ ಜಡಾತ್ಮಕವಾದ ಈ ಪ್ರಪಂಚ ಅವನಿಗೆ ಅಧೀನ. ದೇವರು ಒಂದಲ್ಲ. ಆತ ಈಶ, ಜೀವ ಆತನ ದಾಸ", ಇತ್ಯಾದಿ ಶ್ರೀ ಮಧ್ವಾಚಾರ್ಯರ ಸಮಗ್ರ ವಾಣಿಯನ್ನು ಜಗತ್ತಿಗೆ ಸಾರಿದ ಮಹಾತ್ಮರು ಶ್ರೀಗುರುರಾಯರು. ಬೃಂದಾವನಸ್ಥರಾಗಿ ವರುಷಗಳೇ ಕಳೆದಿದ್ದರೂ ಇಂದಿಗೂ ಮಹಿಮೆಗಳನ್ನು ತೋರುತ್ತಾ ಭಕ್ತರನ್ನು ಅನುಗ್ರಹಿಸಿ, ಅವರಿಗೆ ಸುಖ ಸಂತೋಷಗಳನ್ನು ಉಂಟುಮಾಡಿ, ಅಪಾರವಾದ ಈ ಸಂಸಾರ ಸಾಗರದಲ್ಲಿ ಮುಳುಗಿ ದಿಕ್ಕುಗಾಣದೇ ತೇಲುತ್ತಾ, ಮುಳುಗುತ್ತಾ ಇರುವವರಿಗೆ ಹಡಗಿನಂತೆ ಸಹಾಯ ಮಾಡುವವರಾಗಿ, ಕಲಿಯುಗದ ಕಾಮಧೇನು - ಕಲ್ಪವೃಕ್ಷವೆಂಬ ಸಾರ್ಥಕ ಬಿರುದನ್ನು ಹೊಂದಿರುವವರು.

ಪ್ರಾಣದೇವರಿಗೆ ವಂದಿಸಿ, ಪ್ರದಕ್ಷಿಣಾ ಪಥದಲ್ಲಿ ಮುನ್ನಡೆದಾಗ ಎದುರಿಗೆ ಒಂದು ದೊಡ್ಡ ಪಲ್ಲಕಿ.

ತೇರನೇರಿ ಮೆರೆದು ಬರುವ ಭೂಸುರವಂದ್ಯ ।

ಗುರುರಾಘವೇಂದ್ರರೆಂತೆಂಬೋ ಯತಿ ಕುಲ ತಿಲಕ ॥

ಪಲ್ಲಕಿಯ ಪಕ್ಕ " **ರಾ** ಎನ್ನೆ ರಾಶಿದೋಶಗಳ ದಹಿಸುವ, **ಘ** ಎನ್ನೆ ಘನ ಜ್ಞಾನ ಭಕುತಿ ಈವ, **ವೇಂ** ಎನ್ನೆ ವೇಗದಿ ಜನನ ಮರಣ ದೂರ, **ದ್ರ** ಎನ್ನೆ ದ್ರವಿಣಾರ್ಥ ಶ್ರುತಿ ಪ್ರತಿಪಾದ್ಯನ ಕಾಂಬ " ಎಂಬ ಫಲಕ.



ಬಲಗಡೆ ಸ್ವಪ್ನ ಲಬ್ಧ ಸ್ವಯಂ ವ್ಯಕ್ತ ಶ್ರೀ ಗುರುರಾಯರ ದಿವ್ಯ ಸನ್ನಿಧಿ ಪ್ರತೀಕ ದರ್ಶನ.

ಎದ್ದು ಬರುತಾರೆ ನೋಡೆ, ಗುರುಗಳು ತಾವೆದ್ದು ಬರುತಾರೆ ನೋಡೆ ॥

ಮುದ್ದು ಬೃಂದಾವನ ಮಧ್ಯದೊಳಗಿಂದ, ತಿದ್ದಿ ಹಚ್ಚಿದ ನಾಮ ಮುದ್ರಗಳಿಂದೊಪ್ಪುತ ॥

ಶ್ರೀ ಗುರುರಾಯರ ಇಷ್ಟದೇವರಾದ ಶ್ರೀರಾಮರ ಶ್ಲೋಕವುಳ್ಳ ಫಲಕ.




ರಾಮಾಯ ರಾಮಭದ್ರಾಯ ರಾಮಚಂದ್ರಾಯ ವೇದಸೇ ।

ರಘುನಾಥಾಯ ನಾಥಾಯ ಸೀತಾಯಾಃ ಪತಯೇ ನಮಃ ॥

ರಾಯರು ಬೃಂದಾವನಾಂತರ್ಗತವಾಗಿ ಹೇಗೆ ಕುಳಿತಿರುವರೋ ಅದೇ ನಿಜ ಸ್ವರೂಪದ ದರ್ಶನ ಸಕಾರಾತ್ಮಕ ಶಕ್ತಿಯ ಕಂಪನದೊಂದಿಗೆ.



ಈಗ, ಎಲ್ಲಾ ಅಪಾಯಗಳು ಮತ್ತು ನಕಾರಾತ್ಮಕ ಶಕ್ತಿಗಳಿಂದ ರಕ್ಷಣೆ ನೀಡುವ **ರಾಯರ ಕವಚ.**

ಕವಚಂ ಶ್ರೀರಾಘವೇಂದ್ರಸ್ಯ ಯತೀಂದ್ರಸ್ಯ ಮಹಾತ್ಮನಃ ।
ವಕ್ಷ್ಯಾಮಿ ಗುರುವರ್ಯಸ್ಯ ವಾಂಛಿತಾರ್ಥಪ್ರದಾಯಕಮ್ ॥ ೧ ॥
ಋಷಿರಸ್ಯಾಪ್ಪಣಾಚಾರ್ಯಃ ಛಂದೋಽನುಷ್ಟುಪ್ ಪ್ರಕೀರ್ತಿತಮ್ ।
ದೇವತಾ ಶ್ರೀರಾಘವೇಂದ್ರಗುರುರಿಷ್ಟಾರ್ಥಸಿದ್ಧಯೇ ॥ ೨ ॥
ಅಷ್ಟೋತ್ತರಶತಂ ಜಪ್ಯಂ ಭಕ್ತಿಯುಕ್ತೇನ ಚೇತಸಾ ।
ಉದ್ಯತ್ಪ್ರದ್ಯೋತನದ್ಯೋತಧರ್ಮಕೂರ್ಮಾಸನೇ ಸ್ಥಿತಮ್ ॥ ೩ ॥
ಏದ್ಯಖದ್ಯೋತನದ್ಯೋತಪ್ರತಾಪಂ ರಾಮಮಾನಸಮ್ ।
ಧೃತಕಾಷಾಯವಸನಂ ತುಲಸೀಹಾರವಕ್ಷಸಮ್ ॥ ೪ ॥
ದೋರ್ದಂಡವಿಲಸದ್ದಂಡಕಮಂಡಲುವಿರಾಜಿತಮ್ ।
ಅಭಯಜ್ಞಾನಮುದ್ರಾಕ್ಷಮಾಲಾಶೀಲಕರಾಂಬುಜಮ್ ॥ ೫ ॥
ಯೋಗೀಂದ್ರವಂದ್ಯಪಾದಾಬ್ಜಂ ರಾಘವೇಂದ್ರಗುರುಂ ಭಜೇ ।
ಶಿರೋ ರಕ್ಷತು ಮೇ ನಿತ್ಯಂ ರಾಘವೇಂದ್ರೋಽಖಿಲೇಷ್ಟದಃ ॥ ೬ ॥
ಪಾಪಾದ್ರಿಪಾಟನೇ ವಜ್ರಃ ಕೇಶಾನ್ ರಕ್ಷತು ಮೇ ಸದಾ ।
ಕ್ಷಮಾಸುರಗಣಾಧೀಶೋ ಮುಖಂ ರಕ್ಷತು ಮೇ ಗುರುಃ ॥ ೭ ॥
ಹರಿಸೇವಾಲಬ್ಧಸರ್ವಸಂಪತ್ಫಾಲಂ ಮಮಾವತು ।
ದೇವಸ್ವಭಾವೋಽವತು ಮೇ ದೃಶೌ ತತ್ತ್ವ ಪ್ರದರ್ಶಕಃ ॥ ೮ ॥
ಇಷ್ಟಪ್ರದಾನೇ ಕಲ್ಪದ್ರುಃ ಶ್ರೋತ್ರೇ ಶ್ರುತ್ಯರ್ಥಬೋಧಕಃ ।
ಭವ್ಯಸ್ವರೂಪೋ ಮೇ ನಾಸಾಂ ಜಿಹ್ವಾಂ ಮೇಽವತು ಭವ್ಯಕೃತ್ ॥ ೯ ॥
ಆಸ್ಯಂ ರಕ್ಷತು ಮೇ ದುಃಖತೂಲಸಂಘಾಗ್ನಿಚರ್ಯಕಃ ।
ಸುಖಧೈರ್ಯಾದಿಸುಗುಣೋ ಭ್ರುವೌ ಮಮ ಸದಾಽವತು ॥ ೧೦ ॥
ಓಷ್ಠೌ ರಕ್ಷತು ಮೇ ಸರ್ವಗ್ರಹನಿಗ್ರಹಶಕ್ತಿಮಾನ್ ।
ಉಪಪ್ಲವೋದಧೇಸ್ಸೇತುರ್ದಂತಾನ್ ರಕ್ಷತು ಮೇ ಸದಾ ॥ ೧೧ ॥
ನಿರಸ್ತದೋಷೋ ಮೇ ಪಾತು ಕಪೋಲೌ ಸರ್ವಪಾಲಕಃ ।
ನಿರವದ್ಯಮಹಾವೇಷಃ ಕಂಠಂ ಮೇಽವತು ಸರ್ವದಾ ॥ ೧೨ ॥
ಕರ್ಣಮೂಲೇ ತು ಪ್ರತ್ಯರ್ಥಿಮೂಕತ್ವಾಕರವಾಙ ಮಮ ।

ಬಹುವಾದಿಜಯೀ ಪಾತು ಹಸ್ತೌ ಸತ್ತತ್ತ್ವವಾದಕೃತ್ ॥ ೧೩ ॥
ಕರೌ ರಕ್ಷತು ಮೇ ವಿದ್ವತ್ಪರಿಜ್ಞೇಯವಿಶೇಷವಾನ್ ।
ವಾಗ್ವೈಖರೀಭವ್ಯಶೇಷಜಯೀ ವಕ್ಷಸ್ಥಲಂ ಮಮ ॥ ೧೪ ॥
ಸತೀಸಂತಾನಸಂಪತ್ತಿಭಕ್ತಿಜ್ಞಾನಾದಿವೃದ್ಧಿಕೃತ್ ।
ಸ್ತನೌ ರಕ್ಷತು ಮೇ ನಿತ್ಯಂ ಶರೀರಾವದ್ಯಹಾನಿಕೃತ್ ॥ ೧೫ ॥
ಪುಣ್ಯವರ್ಧನಪಾದಾಬ್ಜಾಭಿಷೇಕಜಲಸಂಚಯಃ ।
ನಾಭಿಂ ರಕ್ಷತು ಮೇ ಪಾರ್ಶ್ವೌ ದ್ಯುನದೀತುಲ್ಯಸದ್ಗುಣಃ ॥ ೧೬ ॥
ಪೃಷ್ಠಂ ರಕ್ಷತು ಮೇ ನಿತ್ಯಂ ತಾಪತ್ರಯವಿನಾಶಕೃತ್ ।
ಕಟಿಂ ಮೇ ರಕ್ಷತು ಸದಾ ವಂಧ್ಯಾಸತ್ಪುತ್ರದಾಯಕಃ ॥ ೧೭ ॥
ಜಘನಂ ಮೇಽವತು ಸದಾ ವ್ಯಂಗಸ್ವಂಗಸಮೃದ್ಧಿಕೃತ್ ।
ಗುಹ್ಯಂ ರಕ್ಷತು ಮೇ ಪಾಪಗ್ರಹಾರಿಷ್ಟವಿನಾಶಕೃತ್ ॥ ೧೮ ॥
ಭಕ್ತಾಘವಿಧ್ವಂಸಕರನಿಜಮೂರ್ತಿಪ್ರದರ್ಶಕಃ ।
ಮೂರ್ತಿಮಾನ್ಪಾತು ಮೇ ರೋಮಂ ರಾಘವೇಂದ್ರೋ ಜಗದ್ಗುರುಃ ॥ ೧೯ ॥
ಸರ್ವತಂತ್ರಸ್ವತಂತ್ರೋಽಸೌ ಜಾನುನೀ ಮೇ ಸದ್ರಾವತು ।
ಜಂಘೇ ರಕ್ಷತು ಮೇ ನಿತ್ಯಂ ಶ್ರೀಮಧ್ವಮತವರ್ಧನಃ ॥ ೨೦ ॥
ವಿಜಯೀಂದ್ರಕರಾಬ್ಜೋತ್ಥಸುಧೀಂದ್ರವರಪುತ್ರಕಃ ।
ಗುಲ್ಫೌ ಶ್ರೀರಾಘವೇಂದ್ರೋ ಮೇ ಯತಿರಾಟ್ ಸರ್ವದಾಽವತು ॥ ೨೧ ॥
ಪಾದೌ ರಕ್ಷತು ಮೇ ಸರ್ವಭಯಹಾರೀ ಕೃಪಾನಿಧಿಃ ।
ಜ್ಞಾನಭಕ್ತಿಸುಪುತ್ರಾಯುರ್ಯಶಃ ಶ್ರೀಪುಣ್ಯವರ್ಧನಃ ॥ ೨೨ ॥
ಕರಪಾದಾಂಗುಲೀಃ ಸರ್ವಾ ಮಮಾವತು ಜಗದ್ಗುರುಃ ।
ಪ್ರತಿವಾದಿಜಯಸ್ವಾಂತಭೇದಚಿಹ್ನಾದರೋ ಗುರುಃ ॥ ೨೩ ॥
ನಖಾನವತು ಮೇ ಸರ್ವಾನ್ ಸರ್ವಶಾಸ್ತ್ರವಿಶಾರದಃ ।
ಅಪರೋಕ್ಷೀಕೃತಶ್ರೀಶಃ ಪ್ರಾಚ್ಯಾಂ ದಿಶಿ ಸದಾಽವತು ॥ ೨೪ ॥
ಸ ದಕ್ಷಿಣೇ ಚಾವತು ಮಾಂ ಸಮುಪೇಕ್ಷಿತಭಾವಜಃ ।
ಅಪೇಕ್ಷಿತಪ್ರದಾತಾ ಚ ಪ್ರತೀಚ್ಯಾಮವತು ಪ್ರಭುಃ ॥ ೨೫ ॥
ದಯಾದಾಕ್ಷಿಣ್ಯವೈರಾಗ್ಯವಾಕ್ಪಾಟವಮುಖಾಂಕಿತಃ ।
ಸದೋದೀಚ್ಯಾಮವತು ಮಾಂ ಶಾಪಾನುಗ್ರಹಶಕ್ತಿಮಾನ್ ॥ ೨೬ ॥

ನಿಖಿಲೇಂದ್ರಿಯದೋಷಘ್ನೋ ಮಹಾನುಗ್ರಹಕೃದ್ಗುರುಃ ।
ಅಧಶ್ಚೋರ್ಧ್ವಂ ಚಾವತು ಮಾಮಷ್ಟಾಕ್ಷರಮನೂದಿತಮ್ ॥ ೧೭ ॥
ಆತ್ಮಾತ್ಮೀಯಾಘರಾಶಿಘ್ನೋ ಮಾಂ ರಕ್ಷತು ವಿದಿಕ್ಷು ಚ ।
ಚತುರ್ಣಾಂ ಚ ಪುಮರ್ಥಾನಾಂ ದಾತಾ ಪ್ರಾತಃ ಸದಾಽವತು ॥ ೧೮ ॥
ಸಂಗ್ರಾಮೇವತು ಮಾಂ ನಿತ್ಯಂ ತತ್ತ್ವವಿತ್ಸರ್ವಸೌಖ್ಯಕೃತ್ ।
ಮಧ್ಯಾಹ್ನೇಽಗಮ್ಯಮಹಿಮಾ ಮಾಂ ರಕ್ಷತು ಮಹಾಯಶಾಃ ॥ ೧೯ ॥
ಮೃತಪೋತಪ್ರಾಣದಾತಾ ಸಾಯಾಹ್ನೇ ಮಾಂ ಸದಾಽವತು ।
ವೇದಿಸ್ಥಪುರುಷೋಜ್ಜೀವೀ ನಿಶೀಥೇ ಪಾತು ಮಾಂ ಗುರುಃ ॥ ೨೦ ॥
ವಹ್ನಿಸ್ಥಮಾಲಿಕೋದ್ಧರ್ತಾ ವಹ್ನಿತಾಪಾತ್ಸದಾಽವತು ।
ಸಮಗ್ರಟೀಕಾವ್ಯಾಖ್ಯಾತಾ ಗುರುರ್ಮೇ ವಿಷಯೇಽವತು ॥ ೨೧ ॥
ಕಾಂತಾರೇವತು ಮಾಂ ನಿತ್ಯಂ ಭಾಟ್ಟ ಸಂಗ್ರಹಕೃದ್ಗುರುಃ ।
ಸುಧಾಪರಿಮಳೋದ್ಧರ್ತಾ ಸ್ವಚ್ಛಂದಸ್ತು ಸದಾಽವತು ॥ ೨೨ ॥
ರಾಜಚೋರವಿಷವ್ಯಾಧಿಯಾದೋವನ್ಯಮೃಗಾದಿಭಿಃ ।
ಅಪಸ್ಮಾರಾಪಹರ್ತಾ ನಃ ಶಾಸ್ತ್ರವಿತ್ಸರ್ವದಾಽವತು ॥ ೨೩ ॥
ಗತೌ ಸರ್ವತ್ರ ಮಾಂ ಪಾತೂಪನಿಷದರ್ಥಕೃದ್ಗುರುಃ ।
ಋಗ್ವ್ಯಾಖ್ಯಾನಕೃದಾಚಾರ್ಯಃ ಸ್ಥಿತೌ ರಕ್ಷತು ಮಾಂ ಸದಾ ॥ ೨೪ ॥
ಮಂತ್ರಾಲಯನಿವಾಸೀ ಮಾಂ ಜಾಗ್ರತ್ಕಾಲೇ ಸದಾಽವತು ।
ನ್ಯಾಯಮುಕ್ತಾವಲೀಕರ್ತಾ ಸ್ವಪ್ನೇ ರಕ್ಷತು ಮಾಂ ಸದಾ ॥ ೨೫ ॥
ಮಾಂ ಪಾತು ಚಂದ್ರಿಕಾವ್ಯಾಖ್ಯಾಕರ್ತಾ ಸುಪ್ತೌ ಹಿ ತತ್ತ್ವಕೃತ್ ।
ಸುತಂತ್ರದೀಪಿಕಾಕರ್ತಾ ಮುಕ್ತೌ ರಕ್ಷತು ಮಾಂ ಗುರುಃ ॥ ೨೬ ॥
ಗೀತಾರ್ಥಸಂಗ್ರಹಕರಸ್ಸದಾ ರಕ್ಷತು ಮಾಂ ಗುರುಃ ।
ಶ್ರೀಮಧ್ವಮತದುಗ್ಧಾಬ್ಧಿಚಂದ್ರೋಽವತು ಸದಾಽನಘಃ ॥ ೨೭ ॥
ಇತಿ ಶ್ರೀರಾಘವೇಂದ್ರಸ್ಯ ಕವಚಂ ಪಾಪನಾಶನಮ್ ।
ಸರ್ವವ್ಯಾಧಿಹರಂ ಸದ್ಯಃ ಪಾವನಂ ಪುಣ್ಯವರ್ಧನಮ್ ॥ ೨೮ ॥
ಯ ಇದಂ ಪಠತೇ ನಿತ್ಯಂ ನಿಯಮೇನ ಸಮಾಹಿತಃ ।
ಅದೃಷ್ಟಿಃ ಪೂರ್ಣದೃಷ್ಟಿಃ ಸ್ಯಾದೇಡಮೂಕೋಽಪಿ ವಾಕ್ಪತಿಃ ॥ ೨೯ ॥
ಪೂರ್ಣಾಯುಃ ಪೂರ್ಣಸಂಪತ್ತಿಭಕ್ತಿಜ್ಞಾನಾಭಿವೃದ್ಧಿಕೃತ್ ।

ಪೀತ್ವಾ ವಾರಿ ನರೋ ಯೇನ ಕವಚೇನಾಭಿಮಂತ್ರಿತಮ್ ॥ ೪೦ ॥
ಜಹಾತಿ ಕುಕ್ಷಿಗಾನ್ ರೋಗಾನ್ ಗುರುವರ್ಯಪ್ರಸಾದತಃ ।
ಪ್ರದಕ್ಷಿಣನಮಸ್ಕಾರಾನ್ ಗುರೋರ್ವೃಂದಾವನಸ್ಯ ಯಃ ॥ ೪೧ ॥
ಕರೋತಿ ಪರಯಾ ಭಕ್ತ್ಯಾ ತದೇತತ್ಕವಚಂ ಪಠನ್ ।
ಪಂಗುಃ ಕೂಣಿಶ್ಚ ಪೌಗಂಡಃ ಪೂರ್ಣಾಂಗೋ ಜಾಯತೇ ಧ್ರುವಮ್ ॥ ೪೨ ॥
ಶೇಷಾಶ್ಚ ಕುಷ್ಠಪೂರ್ವಾಶ್ಚ ನಶ್ಯಂತ್ಯಾಮಯರಾಶಯಃ ।
ಅಷ್ಟಾಕ್ಷರೇಣ ಮಂತ್ರೇಣ ಸ್ತೋತ್ರೇಣ ಕವಚೇನ ಚ ॥ ೪೩ ॥
ವೃಂದಾವನೇ ಸನ್ನಿಹಿತಮಭಿಷಿಚ್ಯ ಯಥಾವಿಧಿ ।
ಯಂತ್ರೇ ಮಂತ್ರಾಕ್ಷರಾಣ್ಯಷ್ಟೌ ವಿಲಿಖ್ಯಾತ್ರ ಪ್ರತಿಷ್ಠಿತಮ್ ॥ ೪೪ ॥
ಷೋಡಶೈರುಪಚಾರೈಶ್ಚ ಸಂಪೂಜ್ಯ ತ್ರಿಜಗದ್ಗುರುಮ್ ।
ಅಷ್ಟೋತ್ತರಶತಾಖ್ಯಾಭಿರರ್ಚಯೇತ್ಕುಸುಮಾದಿಭಿಃ ॥ ೪೫ ॥
ಫಲೈಶ್ಚ ವಿವಿಧೈರೇವ ಗುರೋರರ್ಚಾಂ ಪ್ರಕುರ್ವತಃ ।
ನಾಮಶ್ರವಣಮಾತ್ರೇಣ ಗುರುವರ್ಯಪ್ರಸಾದತಃ ॥ ೪೬ ॥
ಭೂತಪ್ರೇತಪಿಶಾಚಾದ್ಯಾಃ ವಿದ್ರವಂತಿ ದಿಶೋ ದಶ ।
ಪಠೇದೇತತ್ತ್ರಿಕಂ ನಿತ್ಯಂ ಗುರೋರ್ವೃಂದಾವನಾಂತಿಕೇ ॥ ೪೭ ॥
ದೀಪಂ ಸಂಯೋಜ್ಯ ವಿದ್ಯಾವಾನ್ ಸಭಾಸು ವಿಜಯೀ ಭವೇತ್ ।
ರಾಜಚೋರಮಹಾವ್ಯಾಘ್ರಸರ್ಪನಕ್ರಾದಿಪೀಡನಾತ್ ॥ ೪೮ ॥
ಕವಚಸ್ಯ ಪ್ರಭಾವೇಣ ಭಯಂ ತಸ್ಯ ನ ಜಾಯತೇ ।
ಸೋಮಸೂರ್ಯೋಪರಾಗಾದಿಕಾಲೇ ವೃಂದಾವನಾಂತಿಕೇ ॥ ೪೯ ॥
ಕವಚಾದಿತ್ರಿಕಂ ಪುಣ್ಯಮಪ್ಪಣಾಚಾರ್ಯದರ್ಶಿತಮ್ ।
ಜಪೇದ್ಯಃ ಸ ಧನಂ ಪುತ್ರಾನ್ ಭಾರ್ಯಾಂ ಚ ಸುಮನೋರಮಾಮ್ ॥ ೫೦ ॥
ಜ್ಞಾನಂ ಭಕ್ತಿಂ ಚ ವೈರಾಗ್ಯಂ ಭುಕ್ತಿಂ ಮುಕ್ತಿಂ ಚ ಶಾಶ್ವತೀಮ್ ।
ಸಂಪ್ರಾಪ್ಯ ಮೋದತೇ ನಿತ್ಯಂ ಗುರುವರ್ಯಪ್ರಸಾದತಃ ॥ ೫೧ ॥

ಇತಿ ಶ್ರೀಮದಪ್ಪಣಾಚಾರ್ಯವಿರಚಿತಂ ಶ್ರೀರಾಘವೇಂದ್ರಕವಚಂ ಸಂಪೂರ್ಣಮ್

ಸುಮಾರು ಎರಡು ಶತಮಾನಗಳ ಹಿಂದೆ ನಂಜನಗೂಡಿನ ರಾಘವೇಂದ್ರ ತೀರ್ಥ ಶ್ರೀಪಾದಂಗಳವರ ಪೀಠದಲ್ಲಿ ಶ್ರೀ ಸುಜ್ಞಾನೇಂದ್ರ ತೀರ್ಥರು ಮಠಾಧೀಶರಾಗಿದ್ದರು. ಇನ್ನೇನು ತಮ್ಮ ಅಂತ್ಯಕಾಲ ಸಮೀಪಿಸುತ್ತಿದೆ ಎಂದರಿತ ಶ್ರೀ ಸುಜ್ಞಾನೇಂದ್ರ ತೀರ್ಥರು, ರಾಯರ ಬೃಂದಾವನದ ಬಳಿಯೇ

ಬೃಂದಾವನಸ್ಥರಾಗಬೇಕೆಂಬ ಬಯಕೆಯಿಂದ ಮಂತ್ರಾಲಯಕ್ಕೆ ತೆರಳಲು ಸಕಲ ಸಿದ್ಧತೆ ಮಾಡಿಕೊಳ್ಳತೊಡಗಿದರು. ಭಕ್ತರಾಧೀನರೆಂದೇ ಪ್ರಖ್ಯಾತರಾಗಿರುವ ಶ್ರೀಗುರುರಾಯರು, ನೀವಿರುವಲ್ಲಿಗೆ ನಾನೇ ಬಂದು ನೆಲೆಸುತ್ತೇನೆ ಎಂದು ಆಶ್ವಾಸನೆಯಿತ್ತರು. ಇದೇ ಸಮಯದಲ್ಲಿ ಶ್ರೀರಂಗಪಟ್ಟಣದಲ್ಲಿ ಹರಿಯುವ ಕಾವೇರಿ ನದಿಯಲ್ಲಿ ಅಗಸನೋರ್ವನಿಗೆ ಗೋಚರಿಸಿದರು. ಅಲ್ಲೇ ನೆಲೆಸಿದ್ದ ಒಬ್ಬ ಬ್ರಾಹ್ಮಣರಿಗೆ ತಮ್ಮನ್ನು ನಂಜನಗೂಡಿಗೆ ಕೊಂಡೊಯ್ಯಬೇಕೆಂಬ ಸ್ವಪ್ನ ಸಂದೇಶವಿತ್ತರು. ಮೈಸೂರು ಮಹಾರಾಜರಾಗಿದ್ದ ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ರಾಯರು ಸ್ವಪ್ನದಲ್ಲಿ ಆದೇಶವಿತ್ತು, ಶ್ರೀಗುರುರಾಯರ ಪ್ರತೀಕವನ್ನು ರಾಜ ಮರ್ಯಾದೆಯಿಂದ ಶ್ರೀರಂಗಪಟ್ಟಣದಿಂದ ನಂಜನಗೂಡಿನವರೆಗೂ ದಯಮಾಡಿಸುವಂತೆ ಮಾಡಿದರು. ಶ್ರೀ ಸುಜ್ಞಾನೇಂದ್ರ ತೀರ್ಥರು ತಮ್ಮ ಅಮೃತ ಹಸ್ತದಿಂದ ಸ್ವಪ್ನಲಬ್ಧ ಸ್ವಯಂವ್ಯಕ್ತ ಶ್ರೀಗುರುರಾಯರ ಪ್ರತಿಷ್ಠಾಪನೆಯನ್ನು ಮಾಡಿದರು. ಭಕ್ತರ ಕಾಮಧೇನುವಾಗಿ ಪ್ರಾಣದೇವರ ಸನ್ನಿಧಿಯಲ್ಲಿ ನೆಲೆಸಿರುವ ಶ್ರೀಗುರುರಾಯರನ್ನು ನಮಿಸುತ್ತಾ **ರಾಯರ ಅಷ್ಟಕ** ಪಾರಾಯಣೆ.

**॥ ಶ್ರೀ ರಾಘವೇಂದ್ರ ಅಷ್ಟಕಂ ॥**

ಜಯ ತುಂಗಾತಟವಸತೇ ವರ ಮಂತ್ರಾಲಯಮೂರ್ತೇ ।
ಕುರು ಕರುಣಾಂ ಮಯಿ ಭೀತೇ ಪರಿಮಳತತಕೀರ್ತೇ ॥
ತವ ಪಾದಾರ್ಚನಸಕ್ತೇ ತವ ನಾಮಾಮೃತಮತ್ತೇ
ದಿಶದಿವ್ಯಾಂ ದೃಶಮೂರ್ತೇ ತವ ಸಂತತ ಭಕ್ತೇ ॥
ಕೃತಗೀತಾಸುವಿವೃತ್ತೇ ಕವಿಜನಸಂಸ್ತುತವೃತ್ತೇ ।
ಕುರು ವಸತಿಂ ಮಮ ಚಿತ್ತೇ ಪರಿವೃತ ಭಕ್ತಾರ್ತೇ ॥
ಯೋಗೀಂದ್ರಾರ್ಚಿತಪಾದೇ ಯೋಗಿಜನಾರ್ಪಿತಮೋದೇ ।
ತಿಮ್ಮಣ್ಣಾನ್ವಯಚಂದ್ರೇ ರಮತಾಂ ಮಮ ಹೃದಯಮ್ ॥
ತಪ್ತಸುಕಾಂಚನಸದೃಶೇ ದಂಡಕಮಂಡಲಹಸ್ತೇ ।
ಜಪಮಾಲಾವರಭೂಷೇ ರಮತಾಂ ಮಮ ಹೃದಯಮ್ ॥
ಶ್ರೀರಾಮಾರ್ಪಿತಚಿತ್ತೇ ಕಾಷಾಯಾಂಬರಯುಕ್ತೇ ।
ಶ್ರೀತುಲಸೀಮಣಿಮಾಲೇ ರಮತಾಂ ಮಮ ಹೃದಯಮ್ ॥
ಮಧ್ವಮುನೀಡಿತತತ್ತ್ವಂ ವ್ಯಾಖ್ಯಾಂತಂ ಪರಿವಾರೇ ।
ಈಡೇಹಂ ಸತತಂ ಮೇ ಸಂಕಟಪರಿಹಾರಮ್ ॥
ವೈಣಿಕವಂಶೋತ್ತಂಸಂ ವರವಿದ್ವನ್ಮಣಿಮಾನ್ಯಮ್ ।
ವರದಾನೇ ಕಲ್ಪತರುಂ ವಂದೇ ಗುರುರಾಜಮ್ ॥

ಸುಶಮೀಂದ್ರಾರ್ಯಕುಮಾರ್ಯೈ-ರ್ವಿದ್ಯೇಂದ್ರೈರ್ಗುರುಭಕ್ತ್ಯಾ ।

ರಚಿತಾ ಶ್ರೀಗುರುಗಾಥಾ ಸಜ್ಜನಮೋದಕರೀ ॥

ಇತಿ ಶ್ರೀ ಸುವಿದ್ಯೇಂದ್ರತೀರ್ಥ ವಿರಚಿತ ಶ್ರೀ ರಾಘವೇಂದ್ರ ಅಷ್ಟಕಮ್ ॥

"ಕಂಡು ಧನ್ಯನಾದೆ ಗುರುಗಳ, ಕಣ್ಣಾರೆ ನಾ ಕಂಡು ಧನ್ಯನಾದೆ,
ಕಪಿಲಾತಟದಿ ಬಂದು ಗುರುವರ ಸುಜ್ಞಾನೇಂದ್ರರಿಂದ ಪರಿಪರಿಯಲಿ ಸೇವೆಗೊಳುತ"

ಎಂದು ಗುನುಗುನಿಸುತ್ತಾ ಶ್ರೀ ಗುರುರಾಯರ ದರ್ಶನದ ಧನ್ಯತಾ ಭಾವದಿಂದ ಪ್ರದಕ್ಷಿಣಾ ಮಾರ್ಗದಲ್ಲಿ ಮುನ್ನಡೆದಾಗ, ಶ್ರೀಮಠದ ಹಿಂದೆ ಇರುವ ಶ್ರೀ ಸುಬೋದೇಂದ್ರ ತೀರ್ಥರು, ಶ್ರೀ ಸುಜನೇಂದ್ರ ತೀರ್ಥರು, ಶ್ರೀ ಸುಜ್ಞಾನೇಂದ್ರ ತೀರ್ಥರು, ಶ್ರೀ ಸುಪ್ರಜ್ಞೇಂದ್ರ ತೀರ್ಥರು ಹಾಗೂ ಶ್ರೀ ಸುಕೃತೀಂದ್ರ ತೀರ್ಥರ ಪಂಚ ಬೃಂದಾವನಗಳ ಪವಿತ್ರ ದರ್ಶನ.

ಪವಿತ್ರ ಪಂಚ ಬೃಂದಾವನದ ದರ್ಶನದ ನಂತರ ಪ್ರದಕ್ಷಿಣೆ ಮುಂದುವರೆಸಿದಾಗ ಅಲ್ಲಿ ಒಂದು ಸ್ತಂಭ. ಶ್ರೀ ಸುಜ್ಞಾನೇಂದ್ರ ತೀರ್ಥರು ದೇವರನ್ನು ನೆನೆಯುತ್ತಾ ದೇವರ ಸಾನ್ನಿಧ್ಯ ಪಡೆದ ಪುಣ್ಯ ಸ್ಥಳ. ಅಲ್ಲಿಯೇ ಎದುರಿಗೆ ಶ್ರೀತುಳಸಿ ಬೃಂದಾವನ ಹಾಗೂ ಸುಂದರ ರಾಯರ ವಿಗ್ರಹ.



ಶಾಸ್ತ್ರೋಕ್ತವಾದ ಅಖಂಡ ಸಾಧನಾ ಮಾರ್ಗದಿಂದ ಶ್ರೀಹರಿಯ ಸರ್ವತ್ರ ವ್ಯಾಪ್ತಿಯನ್ನೂ ಸರ್ವೋತ್ತಮತ್ವವನ್ನೂ ತಾವೂ ಪ್ರತ್ಯಕ್ಷ ನೋಡಿ, ಸಮಕಾಲೀನರಾದ ಸುಜೀವಿಗಳಿಗೂ ತೋರಿಸಿಕೊಟ್ಟವರು ಶ್ರೀ ಗುರುರಾಯರು. ಶ್ರೀಹರಿಯ ಅಚ್ಚುಮೆಚ್ಚಿನ ಭಕ್ತರಾಗಿ, ತಮ್ಮನ್ನು ನಂಬಿದ ಅನಂತ ಸುಜೀವಿಗಳನ್ನು ಉದ್ಧಾರ ಮಾಡಿ, ಅಪರಿಮಿತ ದೈವೀ ಸಂಪತ್ತನ್ನು ಧಾರೆಯೆರೆದು, ಅವರವರ ಯೋಗ್ಯತಾನುಸಾರವಾಗಿ ಇಷ್ಟಾರ್ಥಗಳನ್ನು ಸಲ್ಲಿಸುತ್ತಾ ಸಂತೋಷಪಡಿಸುತ್ತಿರುವ ಅಗಮ್ಯ ಮಹಿಮಾಶಾಲಿಗಳು. ಘನಶ್ಯಾಮಸುಂದರ ನಂದನಂದನನ

ಪಾದಾರವಿಂದಗಳು ಶ್ರೀಗುರುರಾಯರ ಅಂತರ್ ದೃಷ್ಟಿಗೆ ಗೋಚರಿಸಿ, ಯತೀಂದ್ರರ ಹೃದಯಾರವಿಂದದಲ್ಲಿ ಶ್ರೀಕೃಷ್ಣ ತತ್ತ್ವ ಸಾಕ್ಷಾತ್ಕಾರವಾದಂತೆನಿಸಿ, ಸುಂದರ ಭಾವನಾ ತರಂಗಗಳ ಅತಿಶಯದ ಸಂಭ್ರಮೋಲ್ಲಾಸ ತುಂಬಿ ಮೈ ಮರೆತ ಅವರ್ಣನೀಯ ಆನಂದದ ಭಕ್ತಿ ಭಾವದಲ್ಲಿ ತಾನೇ ತಾನಾಗಿ ಚಿಮ್ಮಿದ ಆನಂದ ಭಾಷ್ಪಗಳ ಮೆರವಣಿಗೆ **“ ಇಂದು ಎನಗೆ ಗೋವಿಂದ “**



ಇಂದು ಎನಗೆ ಗೋವಿಂದ ನಿನ್ನಯ ಪಾದಾರವಿಂದವ ತೋರೋ ಮುಕುಂದನೆ ||ಪ|| ಸುಂದರ
ವದನನೆ ನಂದಗೋಪನ ಕಂದ
ಮಂದರೋದ್ಧಾರ ಆನಂದ ಇಂದಿರಾ ರಮಣ ||ಅಪ||
ನೊಂದೆನಯ್ಯ ಭವಬಂಧನದೊಳು ಸಿಲುಕಿ|
ಮುಂದೆ ದಾರಿ ಕಾಣದೆ ಕುಂದಿದೆ ಜಗದೊಳು|
ಕಂದನಂತೆಂದೆನ್ನ ಕುಂದುಗಳೆಣಿಸದೆ ತಂದೆ ಕಾಯೊ ಕೃಷ್ಣ ಕಂದರ್ಪಜನಕನೆ ||೧||

ಮೂಢತನದಿ ಬಹು ಹೇಡಿ ಜೀವ ನಾನಾಗಿ ದೃಢಭಕುತಿಯನು ಮಾಡಲಿಲ್ಲವೊ ಹರಿಯೆ।
ನೋಡಲಿಲ್ಲವೊ ನಿನ್ನ ಪಾಡಲಿಲ್ಲವೊ ಮಹಿಮೆ।
ಗಾಡಿಕಾರ ಕೃಷ್ಣ ಬೇಡಿ ಕೊಂಬೆನೊ ನಿನ್ನ ॥೨॥
ಧಾರುಣಿಯೊಳು ಭೂಭಾರಜೀವ ನಾನಾಗಿ ದಾರಿತಪ್ಪಿ ನಡೆದೆ ಸೇರಿದೆ ಕುಜನರ।
ಆರೂ ಕಾಯುವರಿಲ್ಲ ಸೇರಿದೆ ನಿನಗಯ್ಯಾ
**ಧೀರವೇಣುಗೋಪಾಲ** ಪಾರುಗಾಣಿಸೊ ಹರಿಯೆ ।೩।

ಶ್ರೀಗುರುರಾಯರ ಸಮಕಾಲೀನರೂ ಆಪ್ತ ಶಿಷ್ಯರೂ ಆದ ಶ್ರೀ ಅಪ್ಪಣಾಚಾರ್ಯರು, ರಾಯರು ಬೃಂದಾವನಸ್ಥರಾಗುವ ಮುನ್ನ ಒಮ್ಮೆ ದರ್ಶನ ಮಾಡೋಣವೆಂದು ಪ್ರವಾಹದಿಂದ ತುಂಬಿ ಹರಿಯುತ್ತಿರುವ ತುಂಗಭದ್ರಾ ನದಿಯನ್ನು ದಾಟಿ ಬರುತ್ತಿರುವ ಅತ್ಯದ್ಭುತ ಆಕಸ್ಮಿಕ ಸನ್ನಿವೇಶದಲ್ಲಿ ಮೈಮರೆತು ಉನ್ನತ ಸ್ಥಾಯಿಯಲ್ಲಿದ್ದಾಗ ಗಂಗಾಪ್ರವಾಹದಂತೆ ಹೊರಹೊಮ್ಮಿ ಬಂದ ಸ್ತೋತ್ರ, ರಾಯರು ಬೃಂದಾವನದಿಂದ "ಸಾಕ್ಷೀಹಯಾಸ್ತ್ಯೋತ್ರಹಿ" ಎಂದು ಪೂರ್ಣಮಾಡಿದ ಸ್ತೋತ್ರ,

**ಶ್ರೀ ರಾಘವೇಂದ್ರ ಸ್ತೋತ್ರ.**

ಶ್ರೀಪೂರ್ಣಬೋಧಗುರುತೀರ್ಥಪಯೋಬ್ಧಿಪಾರಾ
ಕಾಮಾರಿಮಾಕ್ಷವಿಷಮಾಕ್ಷಶಿರಃ ಸ್ಪೃಶಂತೀ ।
ಪೂರ್ವೋತ್ತರಾಮಿತತರಂಗಚರತ್ಸುಹಂಸಾ
ದೇವಾಳಿಸೇವಿತಪರಾಂಘ್ರಿಪಯೋಜಲಗ್ನಾ ॥ ೧ ॥
ಜೀವೇಶಭೇದಗುಣಪೂರ್ತಿಜಗತ್ಸುಸತ್ತ್ವ
ನೀಚೋಚ್ಚಭಾವಮುಖನಕ್ರಗಣೈಃ ಸಮೇತಾ ।
ದುರ್ವಾದ್ಯಜಾಪತಿಗಿಳೈಃ ಗುರುರಾಘವೇಂದ್ರ
ವಾಗ್ದೇವತಾಸರಿದಮುಂ ವಿಮಲೀ ಕರೋತು ॥ ೨ ॥
ಶ್ರೀರಾಘವೇಂದ್ರಃ ಸಕಲಪ್ರದಾತಾ ಸ್ವಪಾದಕಂಜದ್ವಯಭಕ್ತಿಮದ್ಭ್ಯಃ ।
ಅಘಾದ್ರಿಸಂಭೇದನದೃಷ್ಟಿವಜ್ರಃ
ಕ್ಷಮಾಸುರೇಂದ್ರೋಽವತು ಮಾಂ ಸದಾಽಯಮ್ ॥ ೩ ॥
ಶ್ರೀರಾಘವೇಂದ್ರೋ ಹರಿಪಾದಕಂಜನಿಷೇವಣಾಲ್ಲಬ್ಧಸಮಸ್ತಸಮ್ಪತ್ ।
ದೇವಸ್ವಭಾವೋ ದಿವಿಜದ್ರುಮೋಽಯಮ್
ಇಷ್ಟಪ್ರದೋ ಮೇ ಸತತಂ ಸ ಭೂಯಾತ್ ॥ ೪ ॥

ಭವ್ಯಸ್ವರೂಪೋ ಭವದುಃಖತೂಲಸಂಘಾಗ್ನಿಚರ್ಯಃ ಸುಖಧೈರ್ಯಶಾಲೀ ।
ಸಮಸ್ತದುಷ್ಟಗ್ರಹನಿಗ್ರಹೇಶೋ ದುರತ್ಯಯೋಪಪ್ಲವಸಿಂಧುಸೇತುಃ ॥ ೫ ॥
ನಿರಸ್ತದೋಷೋ ನಿರವದ್ಯವೇಷಃ ಪ್ರತ್ಯರ್ಥಿಮೂಕತ್ತ್ವನಿದಾನಭಾಷಃ ।
ವಿದ್ವತ್ಪರಿಜ್ಞೇಯಮಹಾವಿಶೇಷೋ ವಾಗ್ವೈಖರೀನಿರ್ಜಿತಭವ್ಯಶೇಷಃ ॥ ೬ ॥
ಸಂತಾನಸಮ್ಪತ್ಪರಿಶುದ್ಧಭಕ್ತಿವಿಜ್ಞಾನವಾಗ್ದೇಹಸುಪಾಟವಾದೀನ್ ।
ದತ್ತ್ವಾ ಶರೀರೋತ್ಥಸಮಸ್ತದೋಷಾನ್ ಹತ್ತ್ವಾ ಸ ನೋಽವ್ಯಾದ್ಗುರುರಾಘವೇಂದ್ರಃ ॥ ೭ ॥
ಯತ್ಪಾದೋದಕಸಂಚಯಃ ಸುರನದೀಮುಖ್ಯಾಪಗಾಸಾದಿತಾ-
ಸಂಖ್ಯಾಽನುತ್ತಮಪುಣ್ಯಸಂಘವಿಲಸತ್ಪ್ರಖ್ಯಾತಪುಣ್ಯಾವಹಃ ।
ದುಸ್ತಾಪತ್ರಯನಾಶನೋ ಭುವಿ ಮಹಾ ವಂಧ್ಯಾಸುಪುತ್ರಪ್ರದೋ
ವ್ಯಂಗಸ್ವಂಗಸಮೃದ್ಧಿದೋ ಗ್ರಹಮಹಾಪಾಪಾಪಹಸ್ತಂ ಶ್ರಯೇ ॥ ೮ ॥
ಯತ್ಪಾದಕಂಜರಜಸಾ ಪರಿಭೂಷಿತಾಂಗಾ
ಯತ್ಪಾದಪದ್ಮಮಧುಪಾಯಿತಮಾನಸಾ ಯೇ ।
ಯತ್ಪಾದಪದ್ಮಪರಿಕೀರ್ತನಜೀರ್ಣವಾಚ
ಸ್ತದ್ದರ್ಶನಂ ದುರಿತಕಾನನದಾವಭೂತಮ್ ॥ ೯ ॥
ಸರ್ವತಂತ್ರಸ್ವತಂತ್ರೋಽಸೌ ಶ್ರೀಮಧ್ವಮತವರ್ಧನಃ ।
ವಿಜಯೀಂದ್ರಕರಾಬ್ಜೋತ್ಥಸುಧೀಂದ್ರವರಪುತ್ರಕಃ ।
ಶ್ರೀರಾಘವೇಂದ್ರೋ ಯತಿರಾಟ್ ಗುರುರ್ಮೇ ಸ್ಯಾದ್ಭಯಾಪಹಃ ।
ಜ್ಞಾನಭಕ್ತಿಸುಪುತ್ರಾಯುಃ ಯಶಃ ಶ್ರೀಃ ಪುಣ್ಯವರ್ಧನಃ ॥ ೧೦ ॥
ಪ್ರತಿವಾದಿಜಯಸ್ವಾಂತಭೇದಚಿಹ್ನಾದರೋ ಗುರುಃ ।
ಸರ್ವವಿದ್ಯಾಪ್ರವೀಣೋಽನ್ಯೋ ರಾಘವೇಂದ್ರಾನ್ನವಿದ್ಯತೇ ॥ ೧೧ ॥
ಅಪರೋಕ್ಷೀಕೃತಶ್ರೀಶಃ ಸಮುಪೇಕ್ಷಿತಭಾವಜಃ ।
ಅಪೇಕ್ಷಿತಪ್ರದಾತಾಽನ್ಯೋ ರಾಘವೇಂದ್ರಾನ್ನವಿದ್ಯತೇ ॥ ೧೨ ॥
ದಯಾದಾಕ್ಷಿಣ್ಯವೈರಾಗ್ಯವಾಕ್ಪಾಟವಮುಖಾಂಕಿತಃ ।
ಶಾಪಾನುಗ್ರಹಶಕ್ತೋಽನ್ಯೋ ರಾಘವೇಂದ್ರಾನ್ನವಿದ್ಯತೇ ॥ ೧೩ ॥
ಅಜ್ಞಾನವಿಸ್ಮೃತಿಭ್ರಾಂತಿಸಂಶಯಾಽಪಸ್ಮೃತಿಕ್ಷಯಾಃ ।
ತಂದ್ರಾಕಮ್ಪವಚಃಕೌಣ್ಠ್ಯಮುಖಾ ಯೇ ಚೇಂದ್ರಿಯೋದ್ಭವಾಃ ।
ದೋಷಾಸ್ತೇ ನಾಶಮಾಯಾಂತಿ ರಾಘವೇಂದ್ರ ಪ್ರಸಾದತಃ ॥ ೧೪ ॥

ಓಂ ಶ್ರೀರಾಘವೇಂದ್ರಾಯ ನಮಃ ಇತ್ಯಽಷ್ಟಾಕ್ಷರಮಂತ್ರತಃ ।
ಜಪಿತಾದ್ಭಾವಿತಾನ್ನಿತ್ಯಂ ಇಷ್ಟಾರ್ಥಾಃ ಸ್ಯುರ್ನಸಂಶಯಃ ॥ ೧೫ ॥
ಹಂತು ನಃ ಕಾಯಜಾನ್ದೋಷಾನಾತ್ಮಾತ್ಮೀಯಸಮುದ್ಭವಾನ್ ।
ಸರ್ವಾನಪಿ ಪುಮರ್ಥಾಂಶ್ಚ ದದಾತು ಗುರುರಾತ್ಮವಿತ್ ॥ ೧೬ ॥
ಇತಿ ಕಾಲತ್ರಯೇ ನಿತ್ಯಂ ಪ್ರಾರ್ಥನಾಂ ಯಃ ಕರೋತಿ ಸಃ ।
ಇಹಾಮುತ್ರಾಪ್ತಸರ್ವೇಷ್ಟೋ ಮೋದತೇ ನಾತ್ರ ಸಂಶಯಃ ॥ ೧೭ ॥
ಅಗಮ್ಯಮಹಿಮಾ ಲೋಕೇ ರಾಘವೇಂದ್ರೋ ಮಹಾಯಶಾಃ ।
ಶ್ರೀಮಧ್ವಮತದುಗ್ಧಾಬ್ಧಿಚಂದ್ರೋಽವತು ಸದಾಽನಘಃ ॥ ೧೮ ॥
ಸರ್ವಯಾತ್ರಾಫಲಾವಾಪ್ತ್ಯೈ ಯಥಾಶಕ್ತಿಪ್ರದಕ್ಷಿಣಮ್ ।
ಕರೋಮಿ ತವ ಸಿದ್ಧಸ್ಯ ಬೃಂದಾವನಗತಂ ಜಲಮ್ ।
ಶಿರಸಾ ಧಾರಯಾಮ್ಯದ್ಯ ಸರ್ವತೀರ್ಥಫಲಾಪ್ತಯೇ ॥ ೧೯ ॥
ಸರ್ವಾಭೀಷ್ಟಾರ್ಥಸಿದ್ಧ್ಯರ್ಥಂ ನಮಸ್ಕಾರಂ ಕರೋಮ್ಯಹಮ್ ।
ತವ ಸಂಕೀರ್ತನಂ ವೇದಶಾಸ್ತ್ರಾರ್ಥಜ್ಞಾನಸಿದ್ಧಯೇ ॥ ೨೦ ॥
ಸಂಸಾರೇಽಕ್ಷಯಸಾಗರೇ ಪ್ರಕೃತಿತೋಽಗಾಧೇ ಸದಾ ದುಸ್ತರೇ ।
ಸರ್ವಾವದ್ಯಜಲಗ್ರಹೈರನುಪಮೈಃ ಕಾಮಾದಿಭಂಗಾಕುಲೇ ।
ನಾನಾವಿಭ್ರಮದುರ್ಭ್ರಮೇಽಮಿತಭಯಸ್ತೋಮಾದಿಫೇನೋತ್ಕಟೇ ।
ದುಃಖೋತ್ಕೃಷ್ಟವಿಷೇ ಸಮುದ್ಧರ ಗುರೋ ಮಾ ಮಗ್ನರೂಪಂ ಸದಾ ॥ ೨೧ ॥
ರಾಘವೇಂದ್ರ ಗುರು ಸ್ತೋತ್ರಂ ಯಃ ಪಠೇದ್ಭಕ್ತಿಪೂರ್ವಕಮ್ ।
ತಸ್ಯ ಕುಷ್ಠಾದಿರೋಗಾಣಾಂ ನಿವೃತ್ತಿಸ್ತ್ವರಯಾ ಭವೇತ್ ॥ ೨೨ ॥
ಅಂಧೋಽಪಿ ದಿವ್ಯದೃಷ್ಟಿಃ ಸ್ಯಾದೇಡಮೂಕೋಽಪಿ ವಾಕ್ಪತಿಃ ।
ಪೂರ್ಣಾಯುಃ ಪೂರ್ಣಸಮ್ಪತ್ತಿಃ ಸ್ತೋತ್ರಸ್ಯಾಽಸ್ಯ ಜಪಾದ್ಭವೇತ್ ॥ ೨೩ ॥
ಯಃ ಪಿಬೇಜ್ಜಲಮೇತೇನ ಸ್ತೋತ್ರೇಣೈವಾಭಿಮಂತ್ರಿತಮ್ ।
ತಸ್ಯ ಕುಕ್ಷಿಗತಾ ದೋಷಾಃ ಸರ್ವೇ ನಶ್ಯಂತಿ ತತ್ ಕ್ಷಣಾತ್ ॥ ೨೪ ॥
ಯದ್ವೃಂದಾವನಮಾಸಾದ್ಯ ಪಂಗುಃ ಖಂಜೋಽಪಿ ವಾ ಜನಃ ।
ಸ್ತೋತ್ರೇಣಾನೇನ ಯಃ ಕುರ್ಯಾತ್ಪ್ರದಕ್ಷಿಣನಮಸ್ಕೃತಿ ।
ಸ ಜಂಘಾಲೋ ಭವೇದೇವ ಗುರುರಾಜಪ್ರಸಾದತಃ ॥ ೨೫ ॥

ಸೋಮಸೂರ್ಯೋಽಪರಾಗೇ ಚ ಪುಷ್ಯಾರ್ಕಾದಿಸಮಾಗಮೇ ।
ಯೋಽನುತ್ತಮಮಿದಂ ಸ್ತೋತ್ರಮಷ್ಟೋತ್ತರಶತಂ ಜಪೇತ್ ।
ಭೂತಪ್ರೇತಪಿಶಾಚಾದಿಪೀಡಾ ತಸ್ಯ ನ ಜಾಯತೇ ॥ ೧೬ ॥
ಏತತ್ಸ್ತೋತ್ರಂ ಸಮುಚ್ಚಾರ್ಯ ಗುರೋರ್ವೃಂದಾವನಾಂತಿಕೇ ।
ದೀಪಸಂಯೋಜನಾಜ್ಞಾನಂ ಪುತ್ರಲಾಭೋ ಭವೇದ್ಧ್ರುವಮ್ ॥ ೧೭ ॥
ಪರವಾದಿಜಯೋ ದಿವ್ಯಜ್ಞಾನಭಕ್ತ್ಯಾದಿವರ್ಧನಮ್ ।
ಸರ್ವಾಭೀಷ್ಟಪ್ರವೃದ್ಧಿಸ್ಸ್ಯಾನ್ನಾತ್ರ ಕಾರ್ಯಾ ವಿಚಾರಣಾ ॥ ೧೮ ॥
ರಾಜಚೋರಮಹಾವ್ಯಾಘ್ರಸರ್ಪನಕ್ರಾದಿಪೀಡನಮ್ ।
ನ ಜಾಯತೇಽಸ್ಯ ಸ್ತೋತ್ರಸ್ಯ ಪ್ರಭಾವಾನ್ನಾತ್ರ ಸಂಶಯಃ ॥ ೧೯ ॥
ಯೋ ಭಕ್ತ್ಯಾ ಗುರುರಾಘವೇಂದ್ರಚರಣದ್ವಂದ್ವಂ ಸ್ಮರನ್ ಯಃ ಪಠೇತ್ ।
ಸ್ತೋತ್ರಂ ದಿವ್ಯಮಿದಂ ಸದಾ ನ ಹಿ ಭವೇತ್ತಸ್ಯಾಸುಖಂ ಕಿಂಚನ ।
ಕಿಂ ತ್ವಿಷ್ಟಾರ್ಥಸಮೃದ್ಧಿರೇವ ಕಮಲಾನಾಥಪ್ರಸಾದೋದಯಾತ್ ।
ಕೀರ್ತಿರ್ದಿಗ್ವಿದಿತಾ ವಿಭೂತಿರತುಲಾ ಸಾಕ್ಷೀ ಹಯಾಸ್ಯೋಽತ್ರ ಹಿ ॥ ೨೦ ॥
ಇತಿ ಶ್ರೀ ರಾಘವೇಂದ್ರಾರ್ಯ ಗುರುರಾಜಪ್ರಸಾದತಃ ।
ಕೃತಂ ಸ್ತೋತ್ರಮಿದಂ ಪುಣ್ಯಂ ಶ್ರೀಮದ್ಭಿರ್ಹ್ಯಪ್ಪಣಾಭಿಧೈಃ ॥ ೨೧ ॥
ಪೂಜ್ಯಾಯ ರಾಘವೇಂದ್ರಾಯ ಸತ್ಯಧರ್ಮರತಾಯ ಚ ।
ಭಜತಾಂ ಕಲ್ಪವೃಕ್ಷಾಯ ನಮತಾಂ ಕಾಮಧೇನವೇ ॥ ೨೨ ॥
ಆಪಾದಮೌಳಿಪರ್ಯಂತಂ ಗುರುಣಾಮಾಕೃತಿಂ ಸ್ಮರೇತ್ ।
ತೇನ ವಿಘ್ನಃ ಪ್ರಣಶ್ಯಂತಿ ಸಿದ್ಧ್ಯಂತಿ ಚ ಮನೋರಥಾಃ ॥ ೨೩ ॥
ದುರ್ವಾದಿಧ್ವಾಂತರವಯೇ ವೈಷ್ಣವೇಂದೀವರೇಂದವೇ ।
ಶ್ರೀರಾಘವೇಂದ್ರ ಗುರವೇ ನಮೋಽತ್ಯಂತ ದಯಾಳವೇ ॥ ೨೪ ॥
ಮೂಕೋಽಪಿ ಯತ್ಪ್ರಸಾದೇನ ಮುಕುಂದಶಯನಾಯ ತೇ ।
ರಾಜರಾಜಾಯತೇ ರಿಕ್ತೋ ರಾಘವೇಂದ್ರಂ ತಮಾಶ್ರಯೇ ॥
ಇತಿ ಶ್ರೀ ಅಪ್ಪಣ್ಣಾಚಾರ್ಯವಿರಚಿತಂ ಶ್ರೀ ರಾಘವೇಂದ್ರ ಸ್ತೋತ್ರಂ ಸಂಪೂರ್ಣಮ್ ॥

ಆಪಾದ ಮೌಳೀ ಪರ್ಯಂತಂ ಗುರೂನಾಂ ಆಕೃತಿಂ ಸ್ಮರೇತ್ ।
ತೇನ ವಿಘ್ನಾಃ ಪ್ರಣಶ್ಯಂತಿ ಸಿಧ್ಯಂತಿ ಚ ಮನೋರಥಾಃ ॥

ಶ್ರೀ ಗುರುರಾಯರ ಕುರಿತಾದ ಕೃತಿಗಳಲ್ಲಿ ಮಂತ್ರಾಲಯ ದರ್ಶನವಿದೆ. ಅರ್ಥೈಸಿಕೊಂಡು ಹಾಡಿದಾಗ ಆ ಗುಚ್ಛವೇ ನಮ್ಮನ್ನು ಮಂತ್ರಾಲಯದತ್ತ ಕರೆದೊಯ್ಯುತ್ತದೆ. ಶ್ರೀಗುರುರಾಯರ ಸ್ಮರಣೆಯೊಂದಿಗೆ ದುರಿತಗಳೆಲ್ಲವೂ ದೂರವಾಗುತ್ತವೆ. “ರಾಮ ನರಹರಿ ಕೃಷ್ಣ ಕೃಷ್ಣರ ನೇಮದಿಂದೀ ಮೂರ್ತಿಗಳ ಪದತಾಮರಸ ಭಜನೆಯನ್ನು ಮಾಡುವ ಕೋಮಲಾಂಗನು, ಕಠಿಣ ಪರವಾದಿ ಸ್ತೋಮಗಳ ಮಹಮಸ್ತಕಾದ್ರಿಗೆ ಭೂಮಿಯೊಳು ಪವಿಯೆನಿಸಿದ ಯತಿ, ಯಾಮಯಾಮಕೆ ಎಲ್ಲರಿಗೆ ಶುಭ ಕಾಮಿತಾರ್ಥವ ಕರೆವನು” ಎಂಬ ಶ್ರೀ ವಿಜಯದಾಸರ ಹೇಳಿಕೆಯಲ್ಲಿ ಗುರುಗಳು ಶ್ರೀ ರಾಮಚಂದ್ರ, ನರಸಿಂಹ, ಶ್ರೀಕೃಷ್ಣ ಮತ್ತು ಕೃಷ್ಣದ್ವೈಪಾಯನರೆನಿಸಿದ ವ್ಯಾಸ ಮಹರ್ಷಿಗಳನ್ನು ಹೇಗೆ ಆರಾಧಿಸಿ ಕೃತಾರ್ಥರಾದರೆಂಬುದನ್ನೂ ಅರ್ಥವತ್ತಾಗಿ ತಿಳಿಸಿರುತ್ತಾರೆ. ಗುರುಗೋಪಾಲ ವಿಠಲಾಂಕಿತ ಸೀನಪ್ಪದಾಸರು ಮಂತ್ರಾಲಯದ ಗುರುಗಳನ್ನು ಸ್ತುತಿಸುವಾಗ “ಫಲ ಬೇಡಿ ಸೇವೆ ಮಾಡುವ ದಾಸನಲ್ಲ, ಫಲಕೆ ಸೇವೆಯ ಇಚ್ಛೈಸುವ ಸ್ವಾಮಿಯಲ್ಲ” ಎಂದು ಮುತ್ತಿನಂತಹಾ ಮಾತುಗಳನ್ನು ಆಡಿರುತ್ತಾರೆ. ಜಗನ್ನಾಥ ದಾಸರು ಮಂತ್ರಾಲಯವನ್ನು ಕಂಡು ಎಷ್ಟು ಮೈಮರೆತಿರುವರು ಎಂಬುದು “ಸುರಪನಾಲಯದಂತೆ ಮಂತ್ರಾಲಯಾ, ಕರೆಸುವುದು ಕಂಗೊಳಿಸುವುದು ನೋಳ್ಪಜನಕೆ” ಎಂಬ ಕೃತಿಯಲ್ಲಿ ವಿದಿತವಾಗುತ್ತದೆ. ಭಗವಂತನ ಸಾಕ್ಷಾತ್ಕಾರಕ್ಕೆ ದಾರಿಯನ್ನು ತೋರುವ, ಬೃಂದಾವನಸ್ಥರಾದ ಶ್ರೀಗುರುರಾಯರ ಅನಂತಾನಂತ ಮಹಿಮೆಗಳನ್ನು ಕೊಂಡಾಡುವ ಹರಿದಾಸರ ನುಡಿಮುತ್ತುಗಳು, ಭಕ್ತರಿಗೆ ದೊರೆತಿರುವ ಅನಂತ ಭಾಗ್ಯಗಳು.

ಯಾಕೆ ಮೂಕನಾದ್ಯೋ ಗುರುವೆ ನೀ ಯಾಕೆ ಮೂಕನಾದ್ಯೋ ।
ಯಾಕೆ ಮೂಕನಾದೆ ಲೋಕಪಾಲಕ ಎನ್ನ ।
ಸಾಕುವರ್ಯಾರಯ್ಯ ಶ್ರೀಕರ ರಾಘವೇಂದ್ರ ॥
ಹಿಂದಕ್ಕೆ ನೀ ಎನ್ನ ಮುಂದೆ ಸುಳಿದಾಡಿದಿ ।
ಮಂದಿಯೊಳಗೆ ಎನ್ನ ಮಂದನ್ನ ಮಾಡಿದ್ಯಲ್ಲೋ ॥ ೧ ॥
ಬೇಕಾಗದಿದ್ದರಿನ್ಯಾಕೆ ಕೈಯನು ಪಿಡಿದೆ । ಕಾಕುಜನರೊಳೆನ್ನ ನೂಕಿಬಿಟ್ಟು ನೀನು ॥ ೨ ॥
ಈಗ ಪಾಲಿಸದಿರೆ ಯೋಗಿಕುಲವರ್ಯ ।
ರಾಘವೇಂದ್ರನೆ ಭವ ಸಾಗುವದ್ಯಾಂಗಯ್ಯ ॥ ೩ ॥
ನಿನ್ನಂಥ ಕರುಣಿಯಿಲ್ಲ ಎನ್ನಂಥ ಕೃಪಣಿಯಿಲ್ಲ ।
ಘನ್ನಮಹಿಮ ನೀ ಎನ್ನನು ಬಿಟ್ಟೀಗ ॥ ೪ ॥
ಜನನಿಯು ನೀ ಎನ್ನ ಜನಕನಯ್ಯ । ಮನ್ನಿಸೊ ನೀ ನಿತ್ಯಾನನ್ಯ ಶರಣನೆ ॥ ೫ ॥

ಎಂದಿಗಾದರು ನಿನ್ನ ಪೊಂದಿಕೊಂಡವನಲ್ಲೋ ।

ಇಂದು ನೀ ಕೈಬಿಟ್ಟರೆನ್ನ ಮುಂದೆ ಕಾಯುವರ್ಯಾರೋ ॥ ೬ ||

ನಾಥನು ನೀ ಅನಾಥನು ನಾನಯ್ಯ । ಪಾತಕರರಿ ಜಗನ್ನಾಥವಿಠ್ಠಲದೂತ ॥ ೭ ||

ಗುರುರಾಘವೇಂದ್ರರ ಚರಣ ಕಮಲವನ್ನು | ಸ್ಮರಿಸುವ ಸುಜನರಿಗೆ ॥ ಪ ||

ಕರೆಕರೆಗೊಳಿಸುವ ದುರಿತ ರಾಶಿಗಳೆಲ್ಲ |

ಕರಿಯು ಸಿಂಹನ ಕಂಡ ತೆರನೆಂತಾಹೋದಯ್ಯ ॥ ಅ ಪ ||

ಗುರು ಮಧ್ವಮತವೆಂಬೊ ವರಕ್ಷೀರ ಶರಧಿಲಿ | ಪರಮ ಶೋಭಿತ ಶಶಿಯಂತುದಿಶಿ ||

ಪರಮತ ತಿಮಿರಕ್ಕೆ ತರಣಿ ಕಿರಣನಾಗಿ |

ಧುರದಿ ಮೆರೆವ ಸಿರಿರಾಮನರ್ಚಕರಾದ ॥ 1 ||

ಹರಿಯೆ ಸರ್ವೋತ್ತುಮ ಸಿರಿಯೆ ಆತನ ರಾಣಿ | ಪರಮೇಷ್ಠಿ ಮರುತರೆ ಗುರುಗಳೆಂದು ||

ಗರುಡ ಶೇಷ ರುದ್ರ ಸಮರೆಂದು ಸ್ಥಾಪಿಸಿ |

ಸ್ಥಿರ ತಾರತಮ್ಯ ಪಂಚಭೇದ ಸತ್ಯವೆಂಬ ॥ 2 ||

ರಾ ಯೆನ್ನೆ ರಾಶಿ ದೋಷಗಳ ದಹಿಸುವದು | ಘ ಯೆನ್ನೆ ಘನ ಜ್ಞಾನ ಭಕುತಿಯನಿತ್ತು ||

ವೇಂ ಯೆನ್ನೆ ವೇಗಾದಿ ಜನನ ಮರಣ ಗೆದ್ದು |

ದ್ರಾ ಯೆನ್ನೆ ದ್ರವಿಣೋದ ಶೃತಿಗೇವೆ ಘನಕಾಂಬ ॥ 3 ||

ಅಂಧಕರಿಗೆ ಅಕ್ಷಿ ವಂಧ್ಯರಿಗೆ ಸುತರು | ಬಂದ ಬಂದವರಭೀಷ್ಟಗಳನಿತ್ತು ||

ಒಂದಾರುನೂರು ವತ್ಸರ ವೃಂದಾವನದಲ್ಲಿ ।

ನಿಂದು ಮೆರೆವ ಕೃಪಾಸಿಂಧು ದೇವಾಂಶರ ॥ 4 ||

ವರತುಂಗಾತೀರ ಮಂತ್ರಾಲಯಪುರದಲ್ಲಿ | ಪರಿ ಪರಿ ಪೂಜಿ ಭೂಸುರರಿಂದ ಕೊಳುತ ||

ಶಿರಿಯರಮಣ ನಮ್ಮ ಗೋಪಾಲವಿಠಲನ್ನ

ಚರಣ ಸೇವಿಸುತಿಹ ಗುರು ಶಿಖಾಮಣಿಯಾದ ॥ 5 ||

ಶ್ರೀ ಗುರುರಾಯರ ವಿಶೇಷ ಪ್ರತೀಕ ಸನ್ನಿಧಾನವಿರುವ ಕಪಿಲಾತೀರದ **"ಶ್ರೀ ಶ್ರೀ ರಾಘವೇಂದ್ರ ಸ್ವಾಮಿಗಳ ಮಠ ಪ್ರತೀಕ ಸನ್ನಿಧಿ"** ಕೇವಲ ಒಂದು ಕ್ಷೇತ್ರವಾಗಿರದೆ, ನಂಬಿ ಬಂದ ಜನಕೆ ಭರವಸೆಯ ಸೆಲೆಯಾಗಿದೆ.

ನಂಬಿ ಕೆಟ್ಟವರಿಲ್ಲವೋ ರಾಯರ ಪಾದ

ನಂಬಿದ ಜನರಿಗೆ - ಬೆಂಬಲ ತಾನಾಗಿ

ಹಂಬಲಿಸಿದ ಫಲ - ತುಂಬಿ ಕೊಡುವರನ್ನ

ಶ್ರೀ ಗುರುರಾಯರ ಆರಾಧನಾ ಮಹೋತ್ಸವದ ಅಂಗವಾಗಿ ಮಾಡುತ್ತಿರುವ ಈ ಸಣ್ಣ ಅನುಸಂಧಾನ ಶ್ರೀ ಗುರುರಾಯರ ಚರಣ ಕಮಲಗಳಿಗೆ ಅರ್ಪಣೆ. ಈಗ ದುರಿತಗಳ ವಿನಾಶಕ್ಕೆ ಕಾರಣರಾಗಿರುವ **ರಾಯರ ಮಂಗಳಾಷ್ಟಕ**, ಜಗನ್ನಾಥ ದಾಸರ ಕೃತಿಯೊಂದಿಗೆ.

ಶ್ರೀ ಮದ್ರಾಮಪದಾರವಿಂದಮಧುಪಃ ಶ್ರೀಮದ್ವವಂಶಾಧಿಪಃ
ಸಚ್ಛಿಷ್ಯೋಡುಗಣೋಡುಪಃ ಶ್ರಿತಜಗದ್ಗೀರ್ವಾಣಸತ್ಪಾದಪಃ ।
ಅತ್ಯರ್ಥಂ ಮನಸಾ ಕೃತಾಚ್ಯುತಜಪಃ ಪಾಪಾಂಧಕಾರಾತಪಃ
ಶ್ರೀಮತ್ಸದ್ಗುರುರಾಘವೇಂದ್ರಯತಿರಾಟ್ ಕುರ್ಯಾದ್ಧ್ರುವಂ ಮಂಗಲಂ ॥1॥
ಕರ್ಮಂದೀಂದ್ರಸುದೀಂದ್ರ ಸದ್ಗುರುಕರಾಂಭೋಜೋದ್ಭವ ಸಂತತಂ
ಪ್ರಾಜ್ಯಧ್ಯಾನವಶೀಕೃತಾಖಿಲಜಗದ್ವಾಸ್ತವ್ಯಲಕ್ಷ್ಮೀಧವಃ ।
ಸಚ್ಛಾಸ್ತ್ರಾದಿವಿದೂಷಕಾಖಿಲಮೃಷಾವಾದೀಭಕಂಠೀರವಃ
ಶ್ರೀಮತ್ಸದ್ಗುರುರಾಘವೇಂದ್ರಯತಿರಾಟ್ ಕುರ್ಯಾದ್ಧ್ರುವಂ ಮಂಗಲಂ ॥2॥
ಸಾಲಂಕಾರಕಕಾವ್ಯನಾಟಕಕಲಾಕಾಣಾದಪಾತಂಜಲ
ತ್ರಯ್ಯರ್ಥಸ್ಮೃತಿಜೈಮಿನೀಯಕವಿತಾಸಂಗೀತಪಾರಂಗತಃ ।
ವಿಪ್ರಕ್ಷತ್ರವಿಡಂಘ್ರಿಜಾತಮುಖರಾನೇಕಪ್ರಜಾಸೇವಿತಃ
ಶ್ರೀಮತ್ಸದ್ಗುರುರಾಘವೇಂದ್ರಯತಿರಾಟ್ ಕುರ್ಯಾದ್ಧ್ರುವಂ ಮಂಗಲಂ ॥3॥
ರಂಗೋತ್ತುಂಗತರಂಗಮಂಗಳಕರಶ್ರೀತುಂಗಭದ್ರಾತಟ
ಪ್ರತ್ಯಸ್ಥದ್ವಿಜಪುಂಗವಾಲುಲ ಸನ್ಮಂತ್ರಾಲಯಾಖ್ಯೇಪುರೇ ।
ನವ್ಯೇಂದ್ರೋಪಲನೀಲಭವ್ಯಕರಸದ್ ಬೃಂದಾವನಾಂತರ್ಗತಃ
ಶ್ರೀಮತ್ಸದ್ಗುರುರಾಘವೇಂದ್ರಯತಿರಾಟ್ ಕುರ್ಯಾದ್ಧ್ರುವಂ ಮಂಗಲಂ ॥4॥
ವಿದ್ವದ್ರಾಜಶಿರಃ ಕಿರೀಟಖಚಿತಾನರ್ಘ್ಯೋರುರತ್ನಪ್ರಭಾ
ರಾಗಾಘೌಘಹಪಾದುಕದ್ವಯಚರಃ ಪದ್ಮಾಕ್ಷಮಾಲಾಧರಃ ।
ಬಾಸ್ವದ್ದಂಡಕಮಂಡಲೋಜ್ವಲಕರಾ ರಕ್ತಾಂಬರಾಡಂಬರಃ
ಶ್ರೀಮತ್ಸದ್ಗುರುರಾಘವೇಂದ್ರಯತಿರಾಟ್ ಕುರ್ಯಾದ್ಧ್ರುವಂ ಮಂಗಲಂ ॥5॥
ಯದ್ ಬೃಂದಾವನಸತ್ಪ್ರದಕ್ಷಿಣನಮಸ್ಕಾರಾಭಿಷೇಕಸ್ತುತಿ
ಧ್ಯಾನಾರಾದನ ಮೃದ್ವಿಲೇಪನಮುಖಾನೇಕೋಪಚಾರಾನ್ ಸದಾ ।
ಕಾರಂಕಾರಮಭಪ್ರಯಾಂತಿ ಚತುರೋ ಲೋಕಾಃ ಪುಮರ್ಥನ್ ಸದಾ

ಶ್ರೀಮತ್ಸದ್ಗುರುರಾಘವೇಂದ್ರಯತಿರಾಟ್ ಕುರ್ಯಾದ್ಧ್ರುವಂ ಮಂಗಲಂ ||6||
ವೇದವ್ಯಾಸಮುನೀಶಮದ್ವಯತಿರಾಟ್ಟೀಕಾರ್ಯವಾಖ್ಯಾಮೃತಂ
ಜ್ಞಾತ್ವಾ ಅದ್ವೈತಮತಂ ಹಲಾಹಲಸಮಂ ತ್ಯಕ್ತ್ವಾ ಸಮಾಖ್ಯಾಪ್ತಯೇ |
ಸಂಖ್ಯಾವತ್ಸುಖದಾಂ ದಶೋಪನಿಶದಾಂ ವ್ಯಾಖ್ಯಾಂ ಸಮಾಖ್ಯನ್ಮುದಾ
ಶ್ರೀಮತ್ಸದ್ಗುರುರಾಘವೇಂದ್ರಯತಿರಾಟ್ ಕುರ್ಯಾದ್ಧ್ರುವಂ ಮಂಗಲಂ ||7||
ಶ್ರೀಮದ್ವೈಷ್ಣವಲೋಕಜಾಲಕಗುರುಃ ಶ್ರೀಮತ್ಪರಿವ್ರಾಡ್ಗುರುಃ
ಶಾಸ್ತ್ರೇ ದೇವಗುರುಃ ಶ್ರಿತಾಮರತರುಃ ಪ್ರತ್ಯೂಹಗೋತ್ರಸ್ವರುಃ |
ಚೇತೋತೀತಶಿರುಸ್ತಥಾ ಜಿತವರುಃ ಸತ್ಸೌಖ್ಯಸಂಪತ್ಕರುಃ
ಶ್ರೀಮತ್ಸದ್ಗುರುರಾಘವೇಂದ್ರಯತಿರಾಟ್ ಕುರ್ಯಾದ್ಧ್ರುವಂ ಮಂಗಲಂ ||8||
ಯಃ ಸಂಧ್ಯಸ್ವನಿಶಂ ಗುರೋರ್ವ್ರತಿಪತೇಃ ಸನ್ಮಂಗಲಸ್ಯಾಷ್ಟಕಂ
ಸದ್ಯಃ ಪಾಪಹರಂ ಸ್ವಸೇವಿವಿದುಷಾಂ ಭಕ್ತ್ಯೈವ ಬಾಭಾಷಿತಂ |
ಭಕ್ತ್ಯ ವ್ಯಕ್ತಿ ಸುಸಂಪದಂ ಶುಭಪದಂ ದೀರ್ಘಾಯುರಾರೋಗ್ಯಕಂ
ಕೀರ್ತಿಂ ಪುತ್ರಕಳತ್ರಬಾಂಧವಸುಹೃನ್ಮೂರ್ತಿ ಪ್ರಯಾತಿ ಧ್ರುವಮ್ ||೯||
|| ಇತಿ ಶ್ರೀಅಪ್ಪಣಾಚಾರ್ಯಕೃತ ಶ್ರೀರಾಘವೇಂದ್ರ ಮಂಗಳಾಷ್ಟಕಂ ಸಂಪೂರ್ಣಂ ||

ತೂಗಿರೆ ರಾಯರ ತೂಗಿರೆ ಗುರುಗಳ ತೂಗಿರೆ ಯತಿಕುಲ ತಿಲಕರ ||ಪ||
ತೂಗಿರೆ ಯೋಗೀಂದ್ರ ಕರಕಮಲ ಪೂಜ್ಯರ ತೂಗಿರೆ ಗುರು ರಾಘವೇಂದ್ರರ ||ಅಪ||
ಕುಂದನ ಮಯವಾದ ಚಂದದ ತೊಟ್ಟಿಲೊಳ್ ಆನಂದದಿ ಮಲಗ್ಯಾರ ತೂಗಿರೆ
ನಂದನ ಕಂದ ಗೋವಿಂದ ಮುಕುಂದನ ಚಂದದಿ ಭಜಿಪರ ತೂಗಿರೆ ||೧||
ಯೋಗ ನಿದ್ರೆಯನ್ನು ಬೇಗನೆ ಮಾಡುವ ಯೋಗೀಶ ವಂದ್ಯರ ತೂಗಿರೆ
ಭೋಗಿಶಯನನ ಪಾದ ಮೋದದಿ ಭಜಿಪರ ಭಾಗವತರನ್ನ ತೂಗಿರೆ ||೨||
ಅದ್ವೈತ ಮತದ ವಿದ್ವಂಸದ ನಿಜ ಗುರು ಮಧ್ವಮತೋದ್ಧಾರನ ತೂಗಿರೆ
ಶುದ್ಧ ಸಂಕಲ್ಪದಿ ಬಂದ ನಿಜ ಭಕ್ತರ ಉಧ್ಧಾರಮಾಳ್ಪರ ತೂಗಿರೆ ||೩ ||
ಭಜಕ ಜನರು ತಮ್ಮ ಭಜನೆಯ ಮಾಡಲು ನಿಜ ಗತಿ ಇರ್ಪರ ತೂಗಿರೆ
ನಿಜ ಗುರು ಜಗನಾಥ ವಿಠಲನ ಪಾದವ ಭಜನೆಯ ಮಾಳ್ಪರ ತೂಗಿರೆ ||೪||

**|| ಶ್ರೀ ಗುರುರಾಜೋ ವಿಜಯತೇ || ಶ್ರೀ ಕೃಷ್ಣಾರ್ಪಣಮಸ್ತು ||**